ವಿ. ಹೇಮಂತಕುಮಾರ, ಬೆಂಗಳೂರು

*ಮೋಡಕ್ಕೆ ಮೋಡ ಟಚ್ ಆದರೆ ಮಳೆ ಬರುತ್ತೆ. ಮನಸ್ಸಿಗೆ ಮನಸ್ಸು ಟಚ್ ಆದರೆ?*



ಸಂಬಂಧಕ್ಕೆ ಕಳೆ ಬರುತ್ತೆ.

ಬಿ. ಚಂದ್ರೇಗೌಡ, ಬೆಂಗಳೂರು

*ಸೀತೆಯ ಅಪಹರಣದ ಸಮಯದಲ್ಲಿ ಸೀತೆಯ ಬಳಿ ಮೊಬೈಲ್ ಇದ್ದು, ಆಕೆ ರಾಮನಿಗೆ ಸಂದೇಶ ನೀಡಿದ್ದರೆ ಏನಾಗುತ್ತಿತ್ತು?*

ವೀರಪ್ಪನ್ ಸಂದೇಶ ತಲುಪಿಯೂ ವರನಟ ವನದಲ್ಲಿದ್ದರಲ್ಲ! ಸಂದೇಶವು ನಾರದ 24/7ನಲ್ಲಿ ಮತ್ತೆಮತ್ತೆ ಪ್ರಸಾರವಾಗುತ್ತಿತ್ತಷ್ಟೆ.

ಸುಜ್ಞಾನಾಚಾರ್ಯ ಕೆ.ಪಿ. ಕಲಿಕೆರೆ

*ಇರುವಾಗ ನೋಡಲು ಹೋಗದೆ ಸತ್ತಾಗ ಪಟಾಕಿಗಳ ಸದ್ದಿಗಿಂತ ಜೋರಾಗಿ ನಾವು ಅಳುವುದೇಕೆ?*

ನಾವು ಸ್ಪಂದನಕ್ಕಿಂತ ರೋದನದಲ್ಲಿ ಎಕ್ಸ್‌ಪರ್ಟ್ಸ್ ಎಂದು ತೋರಿಸಲು.

ಬಾ.ರಂ. ಸುರೇಶ್, ಶಿವಮೊಗ್ಗ

*ಕಾನೂನಿನ ಕೈ ತುಂಬಾ ಉದ್ದ ಎನ್ನುತ್ತಾರೆ. ಅದು ಎಷ್ಟು ಉದ್ದ ಇರಬಹುದು?*



ಬಲಿಷ್ಠರ ಬಾಗಿಲು ತಲುಪುವವರೆಗೆ. ಒಳಹೋಗುವಷ್ಟು ಉದ್ದ ಇನ್ನೂ ಆಗಿಲ್ಲ.

ಬಿ. ಬೋರೇಗೌಡ, ಸರಸ್ವತಿಪುರ

*ಜಾತಿ, ದೇವರು, ಧರ್ಮ, ಜೋತಿಷಿ, ಮಠದ ಸ್ವಾಮಿಗಳು; ಇವರಲ್ಲಿ ಯಾರು ನಿಜವಾದ ಭಯೋತ್ಪಾದಕರು?*

ಸಾಧನೆಗಾಗಿ ಬಳಸಿದರೆ ಎಲ್ಲವೂ ಹಿತೋತ್ಪಾದಕವೇ; ಸಾಧನವಾಗಿ ಬಳಸಿದರೆ ಎಲ್ಲವೂ ಭಯೋತ್ಪಾದಕವೇ.

ರತ್ನಜ, ಮೈಸೂರು

*ಗಂಡಸರ ಸಂಬಳ, ಹೆಂಗಸರ ವಯಸ್ಸು ಕೇಳಬಾರದಂತೆ. ನಿಮ್ಮ ಸಂಬಳ ಮತ್ತು ವಯಸ್ಸು ಕೇಳಬಹುದೆ?*

ಎರಡನ್ನೂ ಕೇಳುವಂತಿಲ್ಲ! ನಾನು ಬುದ್ಧಿಯಿಂದ ಅದು, ಹೃದಯದಿಂದ ಇದು.

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು

*ಅತ್ತೆ ಸೊಸೆಯನ್ನು ಹೊಗಳುವುದು ಯಾವಾಗ?*

ಆದರ್ಶ ಅತ್ತೆ ಸೊಸೆ ಕಾರ್ಯಕ್ರಮದಲ್ಲಿ ಭಾಗವಹಿಸಿದಾಗ.

ವಿ.ಎಂ.ಎಸ್. ಶಾನುಭಾಗ, ಕುಂದಾಪುರ

*ಯಾವುದೇ ಘಟನೆ ವಿವರಿಸುವಾಗ ವೃತ್ತಾಂತ ಹೇಳಿದೆ ಎನ್ನುವರು; ಚೌಕಾಂತ, ಆಯತಾಂತ ಏಕೆ ಅಲ್ಲ?*

ಘಟನೆ ತಲೆಯಲ್ಲಿ 'ಸುಳಿ'ದು, ನಾಲಿಗೆಯಲ್ಲಿ 'ಉರುಳು'ತ್ತದಲ್ಲಾ; ಸುಳಿ, ಉರುಳು, ಎಲ್ಲವೂ ವೃತ್ತಸಂಬಂಧಿತವೇ.

ಸುಂದರ್, ಬೆಂಗಳೂರು

*ರಾಮ, ರಾಮ, ರಾಮ ಎನ್ನುವುದು ಮೋಕ್ಷಕ್ಕೆ ಸಾಧನ. ರಾಮ್, ರಾಮ್, ರಾಮ್ ಎನ್ನುವುದು?*

ತಿಳಿ ನಗೆಯ, ಮನವರಳುವ ಸುಧೆ ಹರಿದು, ದುಗುಡದ ಮೋಕ್ಷಕ್ಕೆ ಸಾಧನ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಕಾಲವನ್ನು ಹೊತ್ತು ಎನ್ನುವುದೇಕೆ?*

ಎಲ್ಲರನ್ನೂ, ಎಲ್ಲವನ್ನೂ ತನ್ನೊಡನೆ ಹೊತ್ತು ಒಯ್ಯುವುದರಿಂದ.

ಭಾರತಿ ಮಾನಗೆ, ಹೊನ್ನಾವರ

*ಮಾತು ಮತ್ತು ಮೌನಕ್ಕೆ ಏನು ವ್ಯತ್ಯಾಸ?*

ಆಲೋಚನೆ ಭ್ರೂಣ; ಮಾತು ಮಗು; ಮೌನ ಆಲೋಚನೆಯ ಭ್ರೂಣವನ್ನು ಹೊತ್ತ ಗರ್ಭಿಣಿ.

ಫಾಲನೇತ್ರ ಸಜ್ಜನ, ಶಿರಸಿ

*ಲೋಕನಾಟಕಕ್ಕೆ ಸೈಡ್ ವಿಂಗ್ ಇದ್ದಿದ್ದರೆ?*

ಇದೆಯಲ್ಲ! ಬೆಳಗಿನಿಂದ ಬೈಗಿನವರೆಗಿನ ನಾಟಕಕ್ಕೆ ಇರುಳಿನ ನಿದ್ರೆಯೇ ಸೈಡ್‌ವಿಂಗ್.

ನಂದ, ಯಡಿಯೂರು

*ನಂಬಿಕೆ ಎಂದರೇನು?*

ಸ್ವಂತಿಕೆ ಹಾಳಾಗುವ ಅಂಜಿಕೆ ಇಲ್ಲವಾಗಿಸುವ ಭಾವ.

## ಬಹುಮಾನಿತ ಪ್ರಶ್ನೆ

ವಿ. ಹಮೀದ್, ವಿಟ್ಲ

*ಈಗೀಗ ಯುವಕರು ಯುವತಿಯರ ಸೌಂದರ್ಯವರ್ಧಕಗಳನ್ನು ಬಳಸಲು ಕಾರಣವೇನು?*

ಅದು ಸ್ತ್ರೀಸಮಾನತೆಗೆ ಬೆಂಬಲ ನೀಡುವ ಪರಿಯಂತೆ.

ರವಿ ಎಂ. ಪೈ, ಹೊನ್ನಾವರ

*ಹತ್ತಿರದ ಸಂಬಂಧಗಳು ದೂರವಾಗಲು ಕಾರಣವೇನು?*

ಅವು ಹೆಸರಿಗೆ ಹತ್ತಿರದ್ದಾದರೂ ಮನಸ್ಸಿಗೆ ಹತ್ತಿರುವುದಿಲ್ಲವಂತೆ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಪ್ರಾಣಕ್ಕಿಂತ ಮಿಗಿಲಾದ ಸಂಪತ್ತು ಯಾವುದು?*

ಲೈಫ್ ಇನ್ಸುರೆನ್ಸ್.

ಗಂಜಾಂ ನಾಗರಾಜ್, ಮೈಸೂರು

*ವಸುದೇವನನ್ನು ದೇವಕಿಯೊಂದಿಗೆ ಕೈಕಾಲುಗಳಿಗೆ ಬೇಡಿ ಹಾಕಿ ಜೈಲಲ್ಲಿರಿಸಿದ್ದರೂ ವರ್ಷವರ್ಷ ಮಕ್ಕಳಾಗುತ್ತಿದ್ದುದರ ರಹಸ್ಯ?*

ಸ್ಥಳಮಹಿಮೆ; ಭಾರತದಲ್ಲಿ ಜನಸಂಖ್ಯಾ ವೃದ್ಧಿಗೆ ಎಲ್ಲ ಕಡಿವಾಣಗಳನ್ನು ಮೀರುವ ಶಕ್ತಿಯಿದೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಕನ್ನಡಿ ಏಕೆ ಸುಳ್ಳು ಹೇಳುವುದಿಲ್ಲ?*



ಅದಕ್ಕೆ ತನ್ನ ಮೇಲೆ ಯಾರೂ ಕೈಮಾಡುವುದಿಲ್ಲ ವೆಂಬ ಧೈರ್ಯ ಇರುವುದರಿಂದ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

*ಎಲ್ಲಕ್ಕಿಂತ ಕಪ್ಪು ಮತ್ತು ಭಾರವಾದ ವಸ್ತು ಯಾವುದು?*

ದುಃಖಭರಿತ ಮನ.

ಮುರಲೀಧರ ಕುಲಕರ್ಣಿ, ಬೀದರ್

*ಮದುವೆಗೂ, ಚುನಾವಣೆಗೂ ಇರುವ ಸಾಮ್ಯವೇನು?*

ಎರಡೂ ಸಂದರ್ಭಗಳಲ್ಲಿ ಆಡಳಿತ ಮತ್ತು ವಿರೋಧಪಕ್ಷಗಳು ಸದನದಲ್ಲಿ ಒಟ್ಟಾಗಿ ಕೂರುತ್ತವೆ.

■ ರಾಮ್